ಹೋಯಿತು. ನಾನು ಅದರ ಬಗ್ಗೆ ಯಾರಿಗೂ ದೋಷ ಕೊಡಲಿಕ್ಕೆ ಹೋಗುವುದಿಲ್ಲ.ಮಾನ್ಯ ಮೊಯಿಲಿಯವರೂ ಇಲ್ಲಿಯೇ ಕುಳಿತಿದ್ದಾರೆ.ನಾನು ಹಿಂದೆ ಮುಂದೆ ಮಾತನಾಡುವುದು ಬೇಕಾಗಿಲ್ಲ. ಚರ್ಚೆ ಮಾಡಿದರೂ ಪ್ರಯೋಜನ ಇಲ್ಲ. ಮೊಯಿಲಿಯವರು ರಾಜಕೀಯ ಮಾಡಲಿಲ್ಲ. ಕೆಲವರು ಹೊರಗಡೆ ಇರುವವರು ಕೆಲವು ಮಹಾನುಭಾವರು ಎಲ್ಲಾ ಮಡುವುದು ಮಾಡಿಸಿದ್ದಾರೆ. ಅವರು ಮಾಡಿದ್ದು "ಬೆಣ್ಣೆ ಕೋತಿ ತಿಂದು ಮೇಕೆ ಬಾಯಿಗೆ ಒರೆಸಿದಂತೆ" ಎಂಬ ರೀತಿ ಮಾಡಿ ಈಗ ಎಲ್ಲಾ ಕಣ್ಣು ಮುಚ್ಚಿಕೊಂಡು ಕುಳಿತಿದ್ದಾರೆ. ನಾನು ಹೊರಗಡೆ ಐದು ವರ್ಷ ಇದ್ದಾಗ. ಈಗ ರಾಜಕೀಯ ಮಾಡುವುದಕ್ಕೆ ಹೊರಟಿದ್ದಾರೆ. ಆದ್ದರಿಂದ ಸನ್ಮಾನ್ಯ ಸದಸ್ಯರಾದ ಮಾನ್ಯ ಟಿ.ಬಿ. ಜಯಚಂದ್ರ ಅವರಿಗೆ ಹೇಳುತ್ತೇನೆ. ನನ್ನ ಆಸೆ ಇರುವುದು ಫ್ಲೋ ಇರಿಗೇಷನ್ ಏನು ಇದೆ, ಅದಕ್ಕೆ ಕಾಸ್ಟ್ ಕಡಿಮೆ ಆಗುತ್ತದೆಯೇ ಫ್ಲೋ ಇರಿಗೇಷನ್‌ಗೆ ಮೆದಲನೆಯತ ಆದ್ಯತೆಯನ್ನು ಕೊಡುತ್ತೇವೆ. ತುಮಕೂರು, ಮಂಡ್ಯ, ಮೈಸೂರು, ಫ್ಲೋ ಇರಿಗೇಷನ್‌ಗ ಎಂಟೈರ್ ಕಾವೇರಿ ಬೇಸಿನ್‌ನಲ್ಲಿ ಮೊದಲನೆಯ ಆದ್ಯತೆಯನ್ನು ಕೋಡುತ್ತೇವೆ. ಇದು ಈ ಸರ್ಕಾರದ ನಿಲುವು. ಆದರೆ ಯಾವ ಲಿಫ್ಟ್ ಇರಿಗೇಷನ್ 80 ಪರ್ಸೆಂಟ್ ಕೆಲಸ ಆಗಿದೆ ಈಗ ಅದನ್ನು ನಿಲ್ಲಿಸಿ ಏನು ಮಾಡಲಿ? ಯಾವುದು ಆಗಿಲ್ಲ. ಅದನ್ನು ಸ್ವಲ್ಪ ಮಟ್ಟಿಗೆ ಸ್ಥಗಿತಗೊಳಿಸಬೇಕಾಗುತ್ತದೆ. ಅಂದರೆ ಅದನ್ನು ಕೈಬಿಡುವುದಿಲ್ಲ. ಆದರೆ ಯಾವುದು ಅಡ್ವಾನ್ಸ್ ಸ್ಟೇಜಿನಲ್ಲಿದೆ ಅದನ್ನು ನಿಲ್ಲಿಸುವುದು ಪ್ರಯೋಜನ ಅಲ್ಲ. ನಮಗೆ ಮಾರಲ್ ರೆಸ್ಪನ್ಸಿಬಿಲಿಟಿ ಇದೆ. ಬಾಗೂರು ಮತ್ತು ನವಿಲೆ ಹತ್ತಿರ ಜನ ಸಾಯುತ್ತಿದ್ದಾರೆ. ಅರಕಲಗೂಡು ಹತ್ತಿರ ಜನ ಸಾಯುತ್ತಿದ್ದಾರೆ. First prefernece will be given to flow irrigation in the entire Cauvery basin, Which includes Mysore, Tumkur and Mandya. ಇಷ್ಟು ಮಾತ್ರ ಪ್ರಾಮಾಣಿಕವಾಗಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ಬಾಗೂರು ಮತ್ತು ನವಿಲೆ ಫ್ಲೋ ಇರಿಗೇಷನ್‌ಬಗ್ಗೆ ಹೇಳಿದ್ದೀರಿ.

SRI H.D. DEVE GOWDA : Flow irrigation will not be stopped either in Mandya, Mysore or Tumkur.

ಶ್ರೀ ಎಸ್.ಸಿ. ಮುದ್ದಹನುಮೇಗೌಡ : ಹೇಮಾವತಿ ವಿಚಾರ ಬಂದಾಗ ದಯಮಾಡಿ ನಮಗೆ ಅವಕಾಶ ಕೊಡಿ.

ಅಧ್ಯಕ್ಷರು : ಇದು ಪ್ರಶ್ನೋತ್ತರ ಬೇರೆಯವರಿಗೆ ಅವಕಾಶವಿಲ್ಲ.

ರಾಜ್ಯ ಸರ್ಕಾರಕ್ಕೆ ಕೇಂದ್ರ ಸರ್ಕಾರದ ಸಹಾಯ ಮತ್ತು ಅನುದಾನ

668 - ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬಾದಾಮಿ) : ಮಾನ್ಯ ಹಣಕಾಸು ಮತ್ತು ಯೋಜನಾ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೇಂದ್ರ ಸರ್ಕಾಕರದಿಂದ ರಾಜ್ಯ ಸರ್ಕಾರಕ್ಕೆ ಯಾವ ಯಾವ ರೀತಿಯಲ್ಲಿ ಆರ್ಥಿಕ ಸೌಲಭ್ಯ ದೊರೆಯುತ್ತದೆ?

ಆ) ಕೇಂದ್ರ ಸರ್ಕಾರ ಯಾವ, ಯಾವ ಯೋಜನಾ ಕಾರ್ಯಕ್ರಮಗಳಿಗೆ ಎಷ್ಟೆಷ್ಟು ಕೋಟಿ ರೂಗಳನ್ನು ಅನುದಾನ ರೂಪದಲ್ಲಿ ನೀಡಿದೆ. ರಾಜ್ಯ ಸರ್ಕಾರದವರು ಉದ್ದೇಶಿತ ಯೋಜನೆಗಳಿಗೆ ಮತ್ತು ಕಾರ್ಯಕ್ರಮಗಳಿಗೆ ಸರಿಯಾಗಿ ಈ ಹಣವನ್ನು ಉಪಯೋಗಿಸುತ್ತಿದ್ದಾರೆಯೇ?

ಶ್ರೀ ಸಿದ್ದರಾಮಯ್ಯ (ಹಣಕಾಸು ಮಂತ್ರಿಗಳು) :

ಅ) ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಸಹಯಾನುದಾನ ಹಾಗೂ ಸಾಲ ರೂಪದಲ್ಲಿ ಆರ್ಥಿಕ ಸೌಲಭ್ಯ ದೊರೆಯುತ್ತದೆ.

ಆ) 1993-94ನೇ ಸಾಲಿನಲ್ಲಿ ಕೇಂದ್ರ ಸರ್ಕಾರವು ಈ ಕೆಳಗಿನ ಅನುದಾನಗಳನ್ನು ಮಂಜೂರು ಮಾಡಿರುತ್ತದೆ :

1) ರಾಜ್ಯ ಯೋಜನಾ ಕಾರ್ಯಕ್ರಮಗಳಿಗೆ 200.24 ಕೋಟಿ ರೂ.ಗಳು

2) ಕೇಂದ್ರ ಯೋಜನಾ ಕಾರ್ಯಕ್ರಮಗಳಿಗೆ 76.86 ಕೋಟಿ ರೂಗಳು

3) ಕೇಂದ್ರ ಪುರಸ್ಕೃತ ಯೋಜನಾ ಕಾರ್ಯಕ್ರಮಗಳಿಗೆ 390.68 ಕೋಟಿ ರೂಗಳು.

ರಾಜ್ಯ ಸರ್ಕಾರವು ಉದ್ದೇಶಿತ ಯೋಜನೆಗಳಿಗೆ ಮತ್ತು ಕಾರ್ಯಕ್ರಮಗಳಿಗೆ ಈ ಅನುದಾನ ಹಣವನ್ನು ಉಪಯೋಗಿಸಿದೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ : ಮಾನ್ಯ ಅಧ್ಯಕ್ಷರೆ, ಸಹಾಯ ಅನುದಾನ ಮತ್ತು ಸಾಲದ ರೂಪದ ಆರ್ಥಿಕ ಸೌಲಭ್ಯ, ತಾವು ಇದರಲ್ಲಿ ವಿಂಗಡಣೆ ಮಾಡಿ ಸಹಾಯ ಧನ ಮತ್ತು ಸಾಲದ ರೂಪದಲ್ಲಿ ಬರತಕ್ಕ ಅನುದಾನ ಎಷ್ಟು ಎಂದು ಹೇಳಿ.ಎರಡನೆಯದಾಗಿ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಇಟ್ಟಿರತಕ್ಕ ಹಣ. ಯಾವ್ಯಾವ ಯೋಜನೆಗಳಲ್ಲಿ ಎಷ್ಟು ಹಣ ಕೊಟ್ಟಿದ್ದೀರಿ? ಕೇಂದ್ರ ಸರ್ಕಾರದಿಂದ ಅನುದಾನ ಪಡೆದು ಆದ ಮೇಲೆ ರಾಜ್ಯ ಸರ್ಕಾರದ ಮ್ಯಾಚಿಂಗ್ ಗ್ರಾಂಟ್ ಏನು ಹಾಕುತ್ತೀರಿ? ಅದರಲ್ಲಿ ಬಿಡುಗಡೆ ಆಗಿರತಕ್ಕ ಹಣ ಎಷ್ಟು ಮತ್ತು ಖರ್ಚಾಗದೇ ಉಳಿದಿರತಕ್ಕ ಹಣ ಎಷ್ಟು ಎಂದು ತಿಳಿಸಿ?

12.10.ಪಿ.ಎಂ.

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೆ, ಕೇಂದ್ರ ಸರ್ಕಾರದಿಂದ ಎರಡು ರೀತಿಯ ಸಹಾಯ ದೊರಕುತ್ತದೆ. ಒಂದು ಸಾಲದ ರೂಪದಲ್ಲಾದರೆ ಮತ್ತೊಂದು ಅನುದಾನದ ರೂಪದಲ್ಲಿ. ಮಾನ್ಯ ಸದಸ್ಯರು ತಮ್ಮ ಎರಡನೆಯ ಪ್ರಶ್ನೆಯಲ್ಲಿ ಅನುದಾನ ರೂಪದಲ್ಲಿ ಎಷ್ಟು ಹಣ ದೊರಕುತ್ತದೆ ಎಂದು ಕೇಳಿದ್ದಾರೆ. 1993-94ನೇ ಸಾಲಿನ ಲೆಕ್ಕ ಪೂರ್ತಿ ಸಿಕ್ಕಿರುವುದರಿಂದ ಯಾವ್ಯಾವ ಬಾಬುಗಳಿಗೆ ಎಷ್ಟೆಷ್ಟು ಹಣ ಬಂದಿದೆಯೆಂದು ತಿಳಿಸಲಾಗಿದೆ. ರಾಜ್ಯ ಯೋಜನೆಯ ಕಾರ್ಯಕ್ರಮಗಳಿಗೆ 200 ಕೋಟಿ 24 ಲಕ್ಷ, ಕೇಂದ್ರ ಯೋಜನೆಯ ಕಾರ್ಯಕ್ರಮಗಳಿಗೆ 76 ಕೋಟಿ 86 ಲಕ್ಷ ಕೇಂದ್ರೀಯ ಪುರಸ್ಕೃತ ಯೋಜನಾ ಕಾರ್ಯಕ್ರಮಗಳಿಗೆ 390 ಕೋಟಿ 68 ಲಕ್ಷ ರೂಪಾಯಿಗಳು. ಮತ್ತು ಯಾವ್ಯಾವ ಬಾಬುಗಳಲ್ಲಿ ಹಣ ಬಂದಿರುತ್ತದೆಯೋ ಆಯಾ ಬಾಬುಗಳಿಗೆ ಬಂದಿರುವ ಪೂರ್ತಿ ಹಣ ವಿನಿಯೋಗವಾಗಿದೆ. ಅಲ್ಲದೆ, ಕೇಂದ್ರ ಸರ್ಕಾರದ ಕೆಲವು ಸ್ಪಾನ್ಸರ್ಡ್ ಸ್ಕೀಮ್‌ಗಳು ಏನಿರುತ್ತವೆ. ಅದಕ್ಕೆ ಅನುಪಾತಗಳನ್ನು ನಿಗದಿ ಪಡಿಸಿರುತ್ತಾರೆ. ಉದಾಹರಣೆಗೆ: ಜವಾಹರ್ ರೋಜ್‌ಗಾರ್ ಕಾರ್ಯಕ್ರಮಗಳಿಗೆ 80 : 20 ಇದ್ದು ಕೆಲವು 50 : 50 ಇರುತ್ತವೆ. ರಾಜ್ಯ ಸರ್ಕಾರಕ್ಕೆ ಎಷ್ಟು ಅನುಪಾತದ ಹಣ ಕೊಡಬೇಕೋ ಅಷ್ಟೂ ಹಣವನ್ನು ಒದಗಿಸಲಾಗಿದೆ. ಕೇಂದ್ರ ಸರ್ಕಾರದಿಂದ ಬಂದಿರುತಕ್ಕ ಹಣವನ್ನು ಕೂಡ ಆಯಾ ಕಾರ್ಯಕ್ರಮಗಳಿಗೆ ವಿನಿಯೋಗಿಸಲಾಗಿದೆಯೆಂಬ ಮಾತನ್ನು ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಶ್ರೀ ಡಿ. ರಾಮದಾಸ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಹಣಕಾಸು ಸಚಿವರು 1993-94ನೇ ಸಾಲಿನ ಕೇಂದ್ರ ಸರ್ಕಾರದ ಅನುದಾನ ಪಟ್ಟಿಯನ್ನು ಉತ್ತರದಲ್ಲಿ ಒದಗಿಸಿದ್ದಾರೆ. ಆದರೆ, 1995ನೇ ಸಾಲಿನ ಬಿಡುಗಡೆಯಾದ ಹಣದ ಅಂಕಿ-ಅಂಶಗಳೆಲ್ಲವೂ

ಸರ್ಕಾರದ ಬಳಿಯಿದ್ದು ಹಣ ಬಿಡುಗಡೆಯಾಗಿ ಐದು ತಿಂಗಳು ಕಳೆದಿದ್ದರೂ 1994-95ನೇ ಸಾಲಿನ ಬಗ್ಗೆ ಮಾಹಿತಿಯನ್ನು ಏಕೆ ಕೊಟ್ಟಿಲ್ಲ? ಇದರ ಬಗ್ಗೆ ಇನ್ನೊಂದು ವಿಚಾರ ಹೇಳುವುದಕ್ಕೆ ಇಚ್ಚಿಪಡಿತ್ತೆನೆ. ನಾವು ಕೆಲವು ಇಲಾಖೆಗಳನ್ನು ರಿವ್ಯೂ ಮಾಡಿದಂಥ ಸಂದರ್ಭದಲ್ಲಿ 1994-95ನೇ ಸಾಲಿಗೆ ಕೇಂದ್ರ ಸರ್ಕಾರದಿಂದ ಬಂದಂಥ ಅನುದಾನದಲ್ಲಿ ಸ್ವಲ್ಪ ಹಣ ಉಪಯೋಗವಾಗಿದೆ ಉಳಿದಿದ್ದರಿಂದ ಆ ಹಣ ರಾಜ್ಯದಿಂದ ಕೇಂದ್ರಕ್ಕೆ ವಾಪಸ್ಸು ಹೋಗಿದೆ. ಆದರೆ ಇದು ಅನುಮೋದನೆ ಆಗಿಲ್ಲದಿರುವುದರಿಂದ ದಯವಿಟ್ಟು ಇದರ ಬಗ್ಗೆ ಉತ್ತರ ಕೊಡಬೇಕಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೆ, 1994-95ನೇ ಸಾಲಿನಲ್ಲಿ ಪರಿಷ್ಕೃತ ಅಂದಾಜಿನಂತೆ ಎಷ್ಟು ಅನುದಾನ ಬಂದಿದೆಯೆಂದು ಅಂಕಿ-ಅಂಶಗಳಿದ್ದರೂಸಹ ಅದರ ಪೂರ್ಣ ಲೆಕ್ಕ ಸರ್ಕಾರಕ್ಕೆ ಇನ್ನೂ ಬಾರದಿರುವುದರಿಂದ, ಸರ್ಕಾರದ ಬಳಿ ಆ ಮಾಹಿತಿ ಇಲ್ಲದಿರುವುದರಿಂದ ಅಂಕಿ-ಅಂಶಗಳನ್ನು ಕೊಟ್ಟಿಲ್ಲ, ಮತ್ತು 1995-96ನೇ ಸಾಲಿನ ಆಯ-ವ್ಯಯದಲ್ಲೂ ಎಷ್ಟು ಅನುದಾನ ಬರುತ್ತದೆಂಬ ವಿಚಾರ ಹೇಳಿದ್ದೇವೆ. ಕೇಂದ್ರ ಸರ್ಕಾರದಿಂದ ಬಂದಿರತಕ್ಕ ಅನುದಾನ ಮತ್ತು ನಾವು ಕೊಡುವ ಮ್ಯಾಚಿಂಗ್ ಗ್ರಾಂಟ್, ಇವೆರಡೂ ಸಂಪೂರ್ಣವಾಗಿ ಖರ್ಚಾಗಿದೆ. ಆದರೆ, 1994-95ನೇ ಸಾಲಿನ ಲೆಕ್ಕ ಸಂಪೂರ್ಣವಾಗಿ ಸರ್ಕಾರಕ್ಕೆ ಬಾರದಿರುವುದರಿಂದ ವಿವರ ಕೊಡುವುದಕ್ಕೆ ಸಾಧ್ಯವಾಗಿಲ್ಲ.

ಮಾಜಿ ಸಚಿವರುಗಳಿಂದ ಬರಬೇಕಾಗಿರುವ ಮೊತ್ತ

83 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದ ಮಾಜಿ ಸಚಿವರುಗಳಿಂದ ಸರ್ಕಾರಕ್ಕೆ ವಿವಿಧ ಬಾಬುಗಳಿಗಾಗಿ ಬರಬೇಕಾಗಿರುವ ಮೊತ್ತವೆಷ್ಟು? ಪ್ರತಿ ಸಚಿವರು ಹೆಸರು ಬರಬೇಕಾಗಿರುವ ಬಾಕಿ. ಯಾವ ಬಾಬುಗಾಗಿ ಬರಬೇಕು. ಇತ್ಯಾದಿ ವಿವರಗಳನ್ನು ಒದಗಿಸುವುದು.*

ಆ) *ಸರ್ಕಾರ ಈ ಬಾಕಿಯನ್ನು ಮನ್ನಾ ಮಾಡುವ ಉದ್ದೇಶವನ್ನು ಹೊಂದಿದೆಯೇ?*

ಇ) *ಈ ಮಾಜಿ ಸಚಿವರು ಬರಬೇಕಾದ ಬಾಕಿ ಮೊತ್ತವನ್ನು ವಸೂಲಿ ಮಾಡಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?*

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯ ಮಂತ್ರಿಗಳು) :

ಅ) ರೂ. 1,30,69,934-90 ಈ ಬಗ್ಗೆ ಅನುಬಂಧದಲ್ಲಿ ವಿವರಿಸಲಾಗಿದೆ.

ಆ) ಇಲ್ಲ

ಇ) ಬಾಕಿಯ ಬಗ್ಗೆ ಮಾಜಿ ಸಚಿವರುಗಳಿಗೆ ವಿವರಗಳನ್ನು ಒದಗಿಸಲಾಗಿದೆ. ಯಾವುದೇ ಸಚಿವರು ಬಾಕಿ ಇರುವ ಸರ್ಕಾರದ ಹಣವನ್ನು ತುಂಬಿಸದೇ ಇದ್ದ ಪಕ್ಷದಲ್ಲಿ ಈ ಹಣವನ್ನು ಕರ್ನಾಟಕ ಶಾಸಕರ ವೇತನ ವಿಶ್ರಾಂತಿ. ವೇತನ ಮತ್ತು ಭತ್ಯೆಗಳ ಅಧಿನಿಯಮ, 1956ರ ನಿಯಮ 13ಬಿ ಯನ್ವಯ, ಅಂತಹ ಸಚಿವರುಗಳಿಗೆ ನೀಡಬೇಕಾಗಿರುವ ಪಂಚಣಿಯಿಂದ ಕಡಿತಗೊಳಿಸಲು ಕ್ರಮ ಕೈಗೊಳ್ಳಲಾಗುವುದು.